## ದ್ವಿತೀಯ ಪಿಯುಸಿ ಪ್ರಥಮ ತ್ರೈಮಾಸಿಕ ಪರೀಕ್ಷೆ, ಆಗಸ್ಟ್ 2026

### ವಿಷಯ: ಕನ್ನಡ (01)

**ಅವಧಿ : 1 ಗಂಟೆ–30 ನಿಮಿಷಗಳು** | **ಗರಿಷ್ಠ ಅಂಕಗಳು : 40**

ಸೂಚನೆ : ಅ–ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

### ಅ–ವಿಭಾಗ

**I** ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: **4x1=4**

1. ಮಯತನೂಜೆ ಎಂದರೆ ಈಕೆ
   ಅ) ಸೀತೆ ಆ) ಸುಮಿತ್ರೆ ಇ) ಸಾವಿತ್ರಿ ಈ) ಮಂಡೋದರಿ

2. ಗುರು ಹೇಗೆ ವರ್ತಿಸಬಾರದು
   ಅ) ಲಘುವಾಗಿ ಆ) ಕೋಪದಿಂದ ಇ) ಆಸೆಯಿಂದ ಈ) ದುಃಖದಿಂದ

3. ಮಿನುಗುವ ಹಸಿರು ಪಾಚಿಗಳನ್ನು ಹೊದ್ದು ಮಲಗಿದ ಕಲ್ಲುಬಂಡೆಗಳ ನಡುವೆ ನುಸುಳಿ ಹರಿಯುತ್ತಿದ್ದ ಸ್ವಚ್ಛ ನೀರಿನ ಹಳ್ಳಕೊಳ್ಳಗಳು ಇವುಗಳ ಬದುಕಿಗೆ ಆಧಾರವಾಗಿದ್ದವು
   ಅ) ಸಿಂಹಬಾಲದ ಕೋತಿಗಳು ಆ) ಚಹಾ ಗಿಡಗಳು
   ಇ) ವಿಷಲಿಂಗ್ ಥ್ರಷ್‌ಗಳು ಈ) ಗಗನಚುಂಬಿ ಮರಗಳು

4. ಕೃಷ್ಣೇಗೌಡನ ಆನೆಯ ಹೆಸರು
   ಅ) ಗಂಗೆ ಆ) ತುಂಗೆ ಇ) ಭದ್ರೆ ಈ) ಗೌರಿ

ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಸೂಕ್ತವಾದ ಉತ್ತರಗಳನ್ನು ಆರಿಸಿ ಬರೆಯಿರಿ: **3x1=3**
**(ಪೂಣಚ್ಚಿ, ಕಣ್ಣುನೋವು, ಹಲ್ಲುನೋವು, ಸುಳ್ಳು)**

5. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ______________
6. ಕೊನೆಗೆ ಬಸಲಿಂಗ ______________ ಗಳಿಂದ ಮುಕ್ತನಾಗಿದ್ದ.
7. ಮಾರ್ಷನ ಜೊತೆಗಾರನ ಹೆಸರು ______________

ಇ) ಹೊಂದಿಸಿ ಬರೆಯಿರಿ: **3x1=3**

8.

| 'ಅ' | 'ಬ' |
|---|---|
| ಅ) ವಚನಗಳು | 1) ಕುಮಾರವ್ಯಾಸ |
| ಬ) ಕರ್ಣಾಟ ಭಾರತ ಕಥಾಮಂಜರಿ | 2) ಉರಿಲಿಂಗಪೆದ್ದಿ |
| ಕ) ಪಗೆಯಂ ಬಾಲಕನೆಂಬರೇ | 3) ನಾಗಚಂದ್ರ |
| | 4) ಪುಲಿಗೆರೆ ಸೋಮನಾಥ |

### ಆ–ವಿಭಾಗ

**II** ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ <u>ಎರಡಕ್ಕೆ</u> ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: **2x2=4**

9. ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?
10. ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು?
11. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?

ಆ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ <u>ಒಂದಕ್ಕೆ</u> ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: **2x1=2**

12. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?
13. ಮಾರ್ಷನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

ಇ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ <u>ಒಂದಕ್ಕೆ</u> ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: **2x1=2**

14. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
15. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

(ಪು.ತಿ.ನೋ)

## ಇ–ವಿಭಾಗ

**III** (ಅ) ಕೆಳಗಿನ ವಾಕ್ಯಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ : **1x3=3**

16. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆ?
17. ಕಲಿಭೀಮನೇ ಮಿಡುಕುಳ್ಳ ಗಂಡನು.

(ಆ) ಕೆಳಗಿನ ವಾಕ್ಯಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ: **1x3=3**

18. ದುರಂತದ ಮೂಲಬೀಜಗಳು ಚಹಾಗಿಡದ ರೂಪದಲ್ಲಿ ಬಂದವು.
19. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

## ಈ–ವಿಭಾಗ

**IV** (ಅ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ: **1x4=4**

20. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
21. ದ್ರೌಪದಿಯು ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

(ಆ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ: **1x4=4**

22. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?
23. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

## ಭಾಷಾಭ್ಯಾಸ

**V** (ಅ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ : **2x2=4**

24. ಕೆಳಗಿನ ಎರಡು ಪದಗಳಿಗೆ ತತ್ಸಮ–ತದ್ಭವ ಬರೆಯಿರಿ.
    1. ದೃಷ್ಟಿ  2. ಜೋಗಿ  3. ಜಸ
25. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.
    1. ಹಾಡುಹಕ್ಕಿ  2. ಕಿರುಹಾದಿ  3. ಹೆಮ್ಮರ
26. ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.
    1. ಸಲಿಲ  2. ಮರ್ಕಟ  3. ನಾರಿ

(ಆ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. **1x4=4**

27. ದೀಪಾ/ನವೀನ್, ದ್ವಿತೀಯ ಪಿಯುಸಿ, ಅಬ್ದುಲ್ ಕಲಾಂ ಪಿಯು ಕಾಲೇಜು, ಆಳಂದ, ಕಲಬುರುಗಿ ಜಿಲ್ಲೆ – ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ನಾಲ್ಕು ದಿನಗಳ ರಜೆ ಕೋರಿ ನಿಮ್ಮ ತರಗತಿ ಉಪನ್ಯಾಸಕರಿಗೆ ಪತ್ರ ಬರೆಯಿರಿ.

**ಅಥವಾ**

ಮತದಾನದ ಜಾಗೃತಿ ಕುರಿತು ಪ್ರಬಂಧ ಬರೆಯಿರಿ.

*****